ರೀತಿಯಿಂದ ಅದನ್ನು ಪರಿಗಣಿಸಿ ಅಲ್ಲೂರು ಗ್ರಾಮಕ್ಕೆ ಕೊಡತಕ್ಕ ಮಂತಿಗೆ ಹಣವನ್ನು ಮನ್ನಾ ಮಾಡಬೇಕೆಂದು ಹೇಳುತ್ತೇನೆ. ರಿಪೋರ್ಟ್ ಬಂದ ನಂತರ ಇತ್ತೀಚೆಗೆ 5000 ರೂಪಾಯಿ ಪಾವತಿ ಮಾಡಿದ್ದಾರೆ, ಉಳಿದ ಹಣವನ್ನು ಮನ್ನಾ ಮಾಡಬೇಕು. ಅದಕ್ಕೆ ಜವಾಬು ಕೊಡಬೇಕು.

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನು ಸಹಾನುಭೂತಿಯಿಂದ ಪರಿಶೀಲಿಸುತ್ತೇನೆ. ಅಂತಹ ಪರಿಸ್ಥಿತಿ ಏನಾದರೂ ಇದ್ದರೆ 10 ಪರ್ಸೆಂಟಾಗಲಿ, 5 ಪರ್ಸೆಂಟಾಗಲಿ ಇಳಿಸಬಹುದು. ಬಹಳ ಬಡವರು ಇದ್ದರೆ ಹಾಗೆ ನಾವು ಮನ್ನಾ ಮಾಡಬಹುದು ಎಂದು ಸರ್ಕಾರಕ್ಕೆ ಡಿಸ್ಕ್ರಿಷನ್ ಇದೆ. ಅದನ್ನು ನೋಡಿಬಿಟ್ಟು ಇಲ್ಲಿ ಮಾನ್ಯ ಸದಸ್ಯರು ಹೇಳತಕ್ಕ ಪರಿಸ್ಥಿತಿ ಇದ್ದಲ್ಲಿ ಅದನ್ನು ವಿಚಾರ ಮಾಡುತ್ತೇನೆ.

Fourth Report of the Committee on Estimates Presentation

Sri K. F. PATIL.—I present the fourth Report of the Committee on Estimates on Roads, Rural Communications, Bridges and Buildings.

Mr. DEPUTY SPEAKER.—The report is presented.

Statement of the Chief Minister *re* : Increase in DA to the School Teachers

ಶ್ರೀ ಡಿ. ದೇವರಾಜ ಅರಸ್ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ಈ ಸಭೆಯಲ್ಲಿ ನಾನು ಉಪಾಧ್ಯಾಯರಿಗೆ ಸಂಬಂಧಪಟ್ಟ ಪ್ರಶ್ನೆ ಬಂದಾಗ ಅವರಿಗೆ ಕೊಡತಕ್ಕ ಡೈಲಿ ಅಲೋಯೆನ್ಸ್ ಬಗ್ಗೆ ಪರಿಶೀಲನೆ ಮಾಡಿ ಹೇಳುತ್ತೇನೆಂದು ಹೇಳಿದ್ದೆ. ಅದನ್ನು ಲೀಗಲ್ ಆಗಿ ಪರಿಶೀಲನೆ ಮಾಡುತ್ತಿದ್ದಾರೆ. ಎಲ್ಲರಿಗೂ ಜನರಲ್ ರೂಲ್ಸ್ ಅಪ್ಲೈ ಆಗುವುದಕ್ಕೆ ಕಾರಣ ಏಲ್ಲಿ ಎಂದು ಲೀಗಲ್ ಒಪೀನಿಯನ್ ಕೊಟ್ಟಿದ್ದಾರೆ. ಸ್ಕ್ರ್ಯಾಚುಟರಿ ಬೋರ್ಡ್ ಬೇರೆ ಇರುವುದರಿಂದ, ಆ ಬೋರ್ಡಿನವರು ಮಾಡತಕ್ಕ ಕಾರ್ಯ ಇದು. ಆದುದರಿಂದ ಬೇರೆ ಗವರ್ನಮೆಂಟ್ ಸರ್ವೆಂಟ್ಸ್‌ಗೆ ಅದು ಅಪ್ಲೈ ಆಗುವುದಿಲ್ಲ. It is a contract between them and the Board. ಎಂದು ಅವರು ಅಭಿಪ್ರಾಯ ಕೊಟ್ಟಿದ್ದಾರೆ. ನಾಳೆ ದಿವಸ ಬೋರ್ಡ್‌ನವರೊಂದಿಗೆ ಸರ್ಕಾರದವರು ಕೂತು ಮಾತನಾಡಿ, ಅಖೈರಾಗಿ ಎಷ್ಟು ಕೊಡುವುದಕ್ಕೆ ಸಾಧ್ಯವೋ, ಅದನ್ನು ಪರಿಶೀಲನೆ ಮಾಡಿಸಿ, ಅಂತಿಮವಾಗಿ ನಾಳೆ ಸ್ಟೇಟ್‌ಮೆಂಟನ್ನು ಮಾಡಿಸೋಣ.

Use of Vanivilas Sagar Water for Agricultural Purposes in Hiriyur Taluk

ಶ್ರೀ ಎಸ್. ಬಂಗಾರಪ್ಪ (ಸೊರಬ).—ನಾನು ನಿನ್ನೆ ನಿಲುವಳಿ ಸೂಚನೆಯನ್ನು ಕಳುಹಿಸಿ ಕೊಟ್ಟಿದ್ದೆ. ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ವಾಣಿವಿಲಾಸ ಸಾಗರ ವಿಷಯಕ್ಕೆ ಆದು ಸಂಬಂಧಪಟ್ಟದ್ದು. ವಾಣಿವಿಲಾಸ ಸಾಗರದಲ್ಲಿ 24 ಸಾವಿರ ಎಕರೆ ಆಚ್ಚುಕಟ್ಟು ಇದೆ, ಇದರಲ್ಲಿ 6 ಸಾವಿರ ಎಕರೆ ತೆಂಗು ಇದೆ. ಅಡಿಕೆ 4 ಸಾವಿರ ಎಕರೆ, ಕಬ್ಬು ಸುಮಾರು 4 ಸಾವಿರ ಎಕರೆ, ಭತ್ತ, ಸೇಂಗಾ, ಇತ್ಯಾದಿ ಸುಮಾರು 2 ಸಾಗಿರ ಎಕರೆಯಲ್ಲಿ ಹಾಲಿ ಫಸಲು ಇದೆ. ಈಗ ವಾಣಿವಿಲಾಸ ಸಾಗರಡಲ್ಲಿರತಕ್ಕ ನೀರಿನ ಬಗ್ಗೆ ಸಂಬಂಧಪಟ್ಟ ಇರಾಖೆಯವರು, ಜವಾಬ್ದಾರಿಯಿಂದ ನೀರನ್ನು ಹತೋಟಿಯಲ್ಲಿ ಇಡದೇ ಇರುವುದರಿಂದ, ಸಂಪೂರ್ಣವಾಗಿ ವಾಣಿವಿಲಾಸ ಸಾಗರದ ನೀರನ್ನು ಹಾಳು ಮಾಡಿ, ಸುಮಾರು 17 ಕೋಟಿ ರೂಪಾಯಿಗಳ ಅಂದಾಜು ನಷ್ಟವಾಗತಕ್ಕ ಪರಿಸ್ಥಿತಿ ಎದಿದೆ. ಮಾನ್ಯ ಉಪಾಧ್ಯಕ್ಷರಿಗೆ ಗೊತ್ತಿರುವ ಹಾಗೆ ಒಂದು ಆಡಿಕೆ